**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ.ನಂ:8325/2022**

ಸಿ.ಡಬ್ಲ್ಯೂ –4 ಪಿ.ಡಬ್ಲ್ಯೂ -4

| | | |
|---|---|---|
| ಹೆಸರು | ಃ | ಮಲಕಪ್ಪ |
| ತಂದೆ:ಗಂಡ | ಃ | ಶಿವಶಿರಣಪ್ಪ |
| ವಯಸ್ಸು | ಃ | 46 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | ಃ | ನರೋಣಾ |

ದಿನಾಂಕಃ24.07.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ-1, 5 ರವರ ಪರಿಚಯ ಇರುತ್ತದೆ. ದಿ.29.05.2022 ರಂದು ಬೋದನ ರಸ್ತೆ ಪೂಲ ಹತ್ತಿರ ಒಂದು ಜೀಪ ಹಾಗೂ ಹಿರೋಹೋಂಡಾ ಅಪಘಾತವಾಗಿತ್ತು. ನಾವು ಅಪಘಾತವನ್ನು ನೋಡಿದೇವು. ನನ್ನ ಎದುರು ಪಂಚನಾಮೆ ಮಾಡಿದರು. ಕ್ರೂಸರ ಹಾಗೂ ದ್ವಿಚಕ್ರವಾಹನವನ್ನು ಜಪ್ತಿಪಡಿಸಿಕೊಂಡರು. ಸಾಕ್ಷಿಗೆ ಈಗ ಪಂಚನಾಮೆಯನ್ನು ತೋರಿಸಿ ಅದರಲ್ಲಿರಮ ಸಹಿ ಗುರುತಿಸಿದ್ದು ಪಂಚನೆಮಯನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ2(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ನನ್ನ ಸಮಕ್ಷಮ ಜಪ್ತಿಪಡಿಸಿಕೊಂಡ ಕ್ರೂಸರ ಸಂಖ್ಯೆಉ ಕೆಎ-48/ಎಂ-0521 ಹಾಗೂ ದ್ವಿಚಕ್ರವಾಹನದ ಸಂಖ್ಯೆ ಕೆಎ-32/ಎಸಿ-4466 ಇರುತ್ತದೆ ಎಂದರೆ ಸರಿ. ನನ್ನಸಮಕ್ಷಮ ಮದ್ಯಾಹ್ನ 11.00 ರಿಂದ 12.00 ಗಂಟೆಯವರೆಗೆ ಗುನ್ನೆ ಪಂಚನಾಮೆಮಾಡಿರುತ್ತಾರೆ ಎಂದರೆ ಸರಿ. ಗುನ್ನೆ ಸ್ಥಳವನ್ನು ಚಾಸಾ-1 ರವರು ತೋರಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ.ಎಸ.ಸಿ. ವಕೀಲರಿಂದಃ**

ಚಾಸಾ-1 ಹಾಗೂ ಚಾಸಾ-5 ರವರು ನಮ್ಮ ಸಮಾಜದವರು ಎಂದರೆ ಸರಿ. ಚಾಸಾ-10 ರಿಂದ 12 ರವರು ನಮ್ಮ ಸಮಾಜದವರು ಎಂದರೆ ಸರಿ. ಪಂಚರಾಗಲು ನನ್ನನ್ನು ಚಾಸಾ-1 ರವರು ಕರೆದಿರುತ್ತಾರೆ. ನಾನು ಹಾಗೂ ಚಾಸಾ-5 ರವರು ಹೊಲಕ್ಕೆ ಹೋಗುವಾಗ ಸ್ಥಳದಲ್ಲಿ ಇದ್ದೇವು. ನಾವು ನೋಡಿರುವ ಕಾರಣ ಹಾಗೂ ಸ್ಥಳದಲ್ಲಿ ಇದ್ದ ಕಾರಣ ಪಂಚರಾಗಲು ಕರೆದಿರುತ್ತಾರೆ. ನಮಗೆ ಪಂಚರಾಗಿ ಬರಲು ಯಾರು ಕರೆದಿರುವುದಿಲ್ಲ ಎಂದರೆ ಸರಿ. ಪಂಚನಾಮೆ ಮಾಡುವ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆದಿರುತ್ತಾರೋ ಇಲ್ಲವೋ ನಾನು ನೋಡಿರುವುದಿಲ್ಲ. ಚಾಸಾ-1 ರವರು ಸಹಿ ಮಾಡು ಎಂದ ಕಾರಣ ನಾನು ಹಾಗೂ ಚಾಸಾ-5 ರವರು ಸಹಿ ಮಾಡಿರುತ್ತೇವೆ ಎಂದರೆ ಸಾಕ್ಷಿ ಚಾಸಾ-5 ರವರು

ನನಗೆ ಸಹಿ ಮಾಡು ಎಂದು ಕೇಳಿದರು ನಾನು ಸ್ಥಳದಲ್ಲಿ ನಡೆದಿರುವುದನ್ನು ನೋಡಿ ಸಹಿ ಮಾಡಿರುತ್ತೇನೆ. ನಮಗೆ ಪಂಚರಾಗಿ ಸಹಿ ಮಾಡಲು ಯಾರು ಹೇಳಿದರು ಎಂದು ನನಗೆ ಗೊತ್ತಿಲ್ಲ. ನಾವು ಸಹಿ ಮಾಡಿದ ಪಂಚನಾಮೆಯನ್ನು ನಮಗೆ ಓದಿ ಹೇಳಿರುವುದಿಲ್ಲ. ಸಾಕ್ಷಿ ಮುಂದುವರೆದು (ಸ್ವಲ್ಪ ಸಮಯವಾದ) ನಂತರ ಓದಿ ಹೇಳಿರುತ್ತಾರೆ ಆದರೆ ನಮಗೆ ನೆನಪಿಲ್ಲ ಎಂದು ಹೇಳುತ್ತಾರೆ. ವಾಹನಗಳನ್ನು ಜಪ್ತಿಪಡಿಸಿಕೊಂಡ ಸ್ಥಳದ ಚಕುಬಂದಿ ಹೇಳಲು ಬರುವುದಿಲ್ಲ. ಕೂರಸರ ಹಾಗೂ ದ್ವಿಚಕ್ರ ವಾಹನ ಯಾವ ಮುಖವಾಗಿ ಬಿದ್ದಿದ್ದವು ಎಂದು ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿ ಕ್ರೂಸರ ನರೋಣಾ ಮುಖವಾಗಿ ಬೆದ್ದಿದ್ದು ಯಾವ ದಿಕ್ಕು ಎಂದು ಹೇಳಲಾಗುವುದಿಲ್ಲ ಎಂದು ಹೇಳುತ್ತಾರೆ. ಪಂಚನಾಮೆ ಮಾಡುವ ಸಮಯದಲ್ಲಿ ನಕಾಶೆ ನನ್ನ ಸಮಕ್ಷಮ ತೆಗೆದಿರುತ್ತಾರೆ ಎಂದರೆ ಸರಿ. ಚಾಸಾ-1 ರವರು ಚಾಸಾ-5 ರವರು ನಮ್ಮ ಸಮಾಜದವರು ಇದ್ದ ಕಾರಣ ನಾನು ಇಂದು ನ್ಯಾಯಾಲಯದಲ್ಲಿ ಸುಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನೆಮ ಆಗಿರುವುದಿಲ್ಲ, ವಾಹನಗಳನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಜಪ್ತಿಪಿಪಡಿಸಿಕೊಳ್ಳುವಾಗ ಕ್ರೂಸರ ಬಲಭಾಗದಲ್ಲಿ ಜಖಂಗೊಂಡಿತ್ತು. ಚಾಸಾ-1 ರವರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.